**ಇಂದು ದಿನಾಂಕ 02.03.2026 ರಂದು ಡಿಡಬ್ಲ್ಯೂ -2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

**1.** ನಂಜಪ್ಪನವರು ಬದುಕಿದ್ದಾಗ ನನ್ನ ತಂದೆ ಉಳುಮೆ ಮಾಡುತ್ತಿದ್ದರು. ನಂಜಪ್ಪನವರು ಯಜಮಾನಿಕೆ ಮಾಡುತ್ತಿದ್ದರು. ನಂಜಪ್ಪನವರ ವೃತ್ತಿ ವ್ಯವಸಾಯ. ಸರ್ವೆ ನಂ.1, 108/3, 108/4, 108/5, 108/6, 45 ರಲ್ಲಿ ಉಳುಮೆ ಮಾಡುತ್ತಿದ್ದರು. ನಂಜಪ್ಪನಿಗೆ ಅವರ ತಂದೆಯ ಕಡೆಯಿಂದ ಆಸ್ತಿ ಬಂದಿತ್ತಾ ಎಂದರೆ ಇಲ್ಲ. ಅವರು ತಿರುಮೇನಹಳ್ಳಿಯಿಂದ ಬಂದು ಮೈಲನಹಳ್ಳಿಯಲ್ಲಿ ಆಸ್ತಿಯನ್ನು ಖರೀದಿಸಿದರು. ನಂಜಪ್ಪನವರು ಖರೀದಿಸಿದ ಆಸ್ತಿಗಳು ಅವರ ಸ್ವಂತ ಆಸ್ತಿಗಳು ಎಂದರೆ ನಿಜ. ನಂಜಪ್ಪ ಮತ್ತು ಸುಬ್ಬಣ್ಣ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದುದ್ದನ್ನು ನಾನು ನೋಡಿದ್ದೇನೆ. ಆ ಬಗ್ಗೆ ತೋರಿಸಲು ದಾಖಲೆಗಳನ್ನು ಕೊಟ್ಟಿದ್ದೇನೆ. ನಂಜಪ್ಪನವರು ಓದಿಲ್ಲ. ಸುಬ್ಬಣ್ಣನವರು 4 ನೇ ತರಗತಿ ಓದಿದ್ದರು. ಸುಬ್ಬಣ್ಣನ ಶಿಕ್ಷಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೊಟ್ಟಿಲ್ಲ. ನಂಜಪ್ಪನವರಿಗೆ ಪೌತಿ ಖಾತೆ ಮೂಲಕ ಯಾವುದೇ ಆಸ್ತಿ ಬಂದಿಲ್ಲ. ಸುಬ್ಬಣ್ಣನವರಿಗೆ ಅವರ ತಂದೆಯ ಮೂಲಕ ಯಾವುದೇ ಆಸ್ತಿಗಳು ಬಂದಿಲ್ಲ. ದಾವಾ ಆಸ್ತಿಗಳನ್ನು ಬಿಟ್ಟು ಸುಬ್ಬಣ್ಣನ ಹೆಸರಿನಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದು ಹೇಳಲಾಗುವುದಿಲ್ಲ. ಸುಬ್ಬಣ್ಣನ ಹೆಸರಿನಲ್ಲಿ ಸಾಕಷ್ಟು ಆಸ್ತಿಗಳು ಇದ್ದವು ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಸುಬ್ಬಣ್ಣನ ಹೆಸರಿನ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.48/ ರಲ್ಲಿ ರಾಮಪ್ಪ ಮತ್ತು ಸುಬ್ಬಣ್ಣ ಎಂದರೆ ನಾನೇ ಸರ್ವೆ ನಂ.75/7 ರಲ್ಲಿ ನನ್ನ ತಮ್ಮನ ಹೆಸರು ಇದೆ ಎಂದರೆ ನಿಜ. ಸರ್ವೆ ನಂ.26/2 ರಲ್ಲಿ ಕೆಂಪಮ್ಮ ನನ್ನ ತಾಯಿಯ ಹೆಸರಿನಲ್ಲಿ ಆಸ್ತಿ ಇದೆ ಎಂದರೆ ಸರಿಯಲ್ಲ. ನಾವು 2 ಎಕರೆ 3 ಎಕರೆಗೆ ಭಾಗ ಮಾಡಿಕೊಂಡಿದ್ದೇವೆ. ಸರ್ವೆ ನಂ.48/3, 80 ರಲ್ಲಿ ಮೌಖಿಕ ಭಾಗ ಮಾಡಿಕೊಂಡಿದ್ದೇವೆ. ಆ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**